# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.61-2013 ಪಿ . ಡಬ್ಲುಃ 4**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕೆ.ಪಿ.ಪ್ರಕಾಶ್<br>ಕುಪ್ಪರವಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 20-04-2024.** |

**ಪಾಟೀ ಸವಾಲುಃ ಶ್ರೀ ಕೆ.ಆರ್ ವಕೀಲರಿಂದಃ**

ನನ್ನನ್ನು ಸಾಕ್ಷಿದಾರರಾಗಿ ಸಹಿ ಮಾಡುವಂತೆ 1 ನೇ ಪ್ರತಿವಾದಿ ರವರು ಕರೆದುಕೊಂಡು ಬಂದಿರುತ್ತಾರೆ. 1 ನೇ ಪ್ರತಿವಾದಿ ರವರು ನಮ್ಮ ಹಾಸ್ಟೆಲ್‌ಗೆ ಬರುತ್ತಿದ್ದು, ಆಗಾಗಿ ನನಗೆ ಪರಿಚಿತರಾಗಿರುತ್ತಾರೆ. ನಾನು ವ್ಯವಸಾಯಗಾರ. ನಾನು ಕನಕದಾಸ ಹಾಸ್ಟೆಲ್‌ನ ಸದಸ್ಯನಾಗಿರುತ್ತೇನೆ. ನನಗೆ 1 ನೇ ಪ್ರತಿವಾದಿ ರವರು ಸುಮಾರು 15 ವರ್ಷಗಳಿಂದ ಪರಿಚಿತರು. ನನಗೂ ಮತ್ತು 1 ನೇ ಪ್ರತಿವಾದಿ ರವರಿಗೂ ಒಡನಾಟ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಯವರು ಎಲ್ಲಾ ವ್ಯವಹಾರದ ಬಗ್ಗೆ ನನ್ನ ಬಳಿ ಹಂಚಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ರವರು ಕ್ರಯದ ವ್ಯವಹಾರದ ಬಗ್ಗೆ ಮಾತ್ರ ನನ್ನ ಬಳಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕಷ್ಟಕಾಲದಲ್ಲಿ 1 ನೇ ಪ್ರತಿವಾದಿ ರವರಿಗೆ ಸಹಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

2. ಕ್ರಯದ ಕರಾರಿಗೆ ಅವಶ್ಯಕವಾದ ಛಾಪಾ ಕಾಗದವನ್ನು 1 ನೇ ಪ್ರತಿವಾದಿ ರವರೇ ತಂದಿರುತ್ತಾರೆ. ಕ್ರಯದ ಕರಾರು ಪತ್ರವನ್ನು ಅರಸು ರವರ ಬಳಿ ತಯಾರು ಮಾಡಿಸಿರುತ್ತಾರೆ. ಕ್ರಯದ ಕರಾರನ್ನು ಬರೆಯಲು ಅವಶ್ಯವಾದ ಮಾಹಿತಿಯನ್ನು 1 ನೇ ಪ್ರತಿವಾದಿ ರವರೇ ನೀಡಿರುತ್ತಾರೆ. ಕ್ರಯದ ಕರಾರಿಗೆ ಸಂಬಂಧಿಸಿದಂತೆ

ನೋಂದಣಿ ಕಚೇರಿಯಲ್ಲಿ ನಡೆದಿರುತ್ತದೆ. ಹಣವನ್ನು ವಾದಿಯವರು 1 ನೇ ಪ್ರತಿವಾದಿ ರವರಿಗೆ ನೀಡಿರುತ್ತಾರೆ. ಕ್ರಯದ ಕರಾರು ರೂ.1,00,000/- ಗಳಿಗೆ ಆಗಿರುತ್ತದೆ. ಕ್ರಯದ ಕರಾರು ಪತ್ರವನ್ನು ಮಾಡುವ ಸಮಯ, ನನ್ನನ್ನು, ವಾದಿ ಮತ್ತು ಪ್ರತಿವಾದಿಗಳನ್ನು ಹೊರತುಪಡಿಸಿ ಶಿವಮಾದು ರವರು ಇದ್ದರು. ಕ್ರಯದ ಕರಾರು ಪತ್ರವನ್ನು 1 ನೇ ಪ್ರತಿವಾದಿ ಮತ್ತು ಅವರ ಪತ್ನಿ ಸೇರಿ ಮಾಡಿಕೊಟ್ಟಿರುತ್ತಾರೆ. ನನ್ನ ಮತ್ತು 1 ನೇ ಪ್ರತಿವಾದಿ ರವರ ನಡುವಿನ ಭಾಂದವ್ಯ ಚೆನ್ನಾಗಿ ಇದ್ದ ಕಾರಣ 1 ನೇ ಪ್ರತಿವಾದಿ ರವರಿಗೆ ಹಣದ ಅವಶ್ಯಕತೆ ಇದ್ದ ಸಮಯದಲ್ಲಿ ನಾನು ಬೇರೆಯವರಿಗೆ ಅವರಿಗೆ ಸಾಲವನ್ನು ಕೊಡಿಸುತ್ತಿದ್ದೆನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಹಣ ಅವಶ್ಯಕತೆ ಇದ್ದುದ್ದರಿಂದ ನಾನು ಅವರಿಗೆ ವಾದಿಯವರನ್ನು ಭೇಟಿ ಮಾಡಿಸಿ ಬಡ್ಡಿಗೆ ಎಂದು ಹಣ ಕೊಡಿಸಿದ್ದು, ಅದರ ಭದ್ರತೆಗಾಗಿ 1 ನೇ ಪ್ರತಿವಾದಿ ರವರು ನಿಪಿ-1 ಅನ್ನು ವಾದಿಯವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯವರೊಂದಿಗೆ, 1 ನೇ ಪ್ರತಿವಾದಿಯ ಮನೆಗೆ ಹೋಗಿ ಬಡ್ಡಿಯನ್ನು ವಸೂಲಿ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯವರು ಬಡ್ಡಿ ವಸೂಲಿಗೆ ಹೋದ ಸಮಯ 1 ನೇ ಪ್ರತಿವಾದಿ ಮನೆಯಲ್ಲಿ ಇಲ್ಲದ ಇದ್ದ ಕಾರಣ ನಾವು 1 ನೇ ಪ್ರತಿವಾದಿಯ ಪತ್ನಿಯೊಂದಿಗೆ ಗಲಾಟೆ ಮಾಡಿದ್ದು, ಆ ಸಮಯ 1 ನೇ ಪ್ರತಿವಾದಿ ರವರ ಪತ್ನಿಯವರು ನನ್ನ ಮತ್ತು ವಾದಿಯವರ ವಿರುದ್ಧ ದೂರು ನೀಡಲು ಮುಂದಾಗಿದ್ದು, ಆ ಸಮಯ ಮಧ್ಯವರ್ತಿಗಳು ಅದನ್ನು ತಡೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯವರು ವಾದಿಯವರಿಂದ ಪಡೆದ ಹಣ ಭದ್ರತೆಗಾಗಿ ನಿಪಿ-1 ರ ಕ್ರಯದ ಕರಾರು ಪತ್ರ ಮತ್ತು ಚೆಕ್ಕುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾರಿಗಾದರೂ ಹಣದ ಅವಶ್ಯಕತೆ ಇದ್ದಲ್ಲಿ ಮಧ್ಯವರ್ತಿಯಾಗಿ ಬೇರೆಯವರಿಂದ ಹಣವನ್ನು ಕೊಡಿಸುವ ಕೆಲಸವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸಾಲ ಕೊಡಿಸುವ ಸಮಯ ಭದ್ರತೆಗಾಗಿ ಪಡೆದುಕೊಂಡ ದಾಖಲೆಗಳನ್ನು ಉಪಯೋಗಿಸಿಕೊಂಡು ಕೇಸನ್ನು ದಾಖಲು ಮಾಡಿಸುತ್ತೇನೆ ಎಂದರೆ ಸರಿಯಲ್ಲ.

3. ನನಗೆ ಹುರ ಗ್ರಾಮದ ಶಿವಕುಮಾರ್ ಗೊತ್ತು. ಬೇರೆಯವರಿಗೆ ಹಣದ ಅವಶ್ಯಕತೆ ಇದ್ದ ಸಮಯದಲ್ಲಿ ನಾನು ಮತ್ತು ಶಿವಕುಮಾರ್ ರವರು ಸೇರಿ ವಾದಿಯಿಂದ ಹಣ ಕೊಡಿಸುತ್ತಿದ್ದೆವು ಎಂದರೆ ಸರಿಯಲ್ಲ. ಈಗ ನನ್ನ ಮತ್ತು ಶಿವಕುಮಾರ್ ರವರ ನಡುವಿನ ಸಂಬಂಧ ಈಗ ಅಷ್ಟಕಷ್ಟೆ ನಾನು ಶಿವಕುಮಾರ್ ರವರು ವಿರುದ್ಧ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗ ನಡುವಿನ ಬಡ್ಡಿ ವ್ಯವಹಾರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸಹ ವಾದಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯರ ನಡುವಿನ ಸಂಬಂಧ ಸರಿ ಇಲ್ಲದೇ ಇರುವುದರಿಂದ ನಾನು ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**